

ಚನ್ನಪ್ಪ: ನನ್ನ ಹೆಂಡತಿಯಿಂದಾಗಿ ನನಗೆ ಸಾಕಾಗಿದೆ.
ವಿಜಯ: ಯಾಕೆ?
ಚನ್ನಪ್ಪ: ಅವಳು ರಾತ್ರಿ ಮೂರು ಗಂಟೆಯಾದರೂ ಮಲಗುವುದಿಲ್ಲ.
ವಿಜಯ: ಅವಳಿಗೆ ನಿದ್ರಾಹೀನತೆ ಕಾಯಿಲೆಯಿದೆಯೇ?
ಚನ್ನಪ್ಪ: ಇಲ್ಲ ನಾನು ಮನೆಗೆ ಬರುವುದನ್ನು ಕಾಯುತ್ತ ಕುಳಿತಿರುತ್ತಾಳೆ!

(ಸಂ) ಹೆಚ್.ಪಿ. ದೀಪ್ತಿ ಪ್ರಕಾಶ್



ಟೀಚರ್: ಕಳೆದ ಸೆಮಿಸ್ಟರ್‌ನಲ್ಲಿ ನೀನು ಗೀತಾ ಜೊತೆ ತಿರುಗಾಡುತ್ತಿದ್ದೆ. ಈ ಸೆಮಿಸ್ಟರ್‌ನಲ್ಲಿ ಶರ್ಮಿಳಾ ಜೊತೆ ತಿರುಗಾಡುತ್ತಿರುವೆ; ಏನಿದೆಲ್ಲಾ?
ಗೋಪಿ: ಸ್ಟಡಿ ಮಾಡುತ್ತಿದ್ದೇನೆ, ಸಿಲೆಬಸ್ ಬದಲಾಗಿದೆ ಅಷ್ಟೆ ಸರ್!

★★★

ಟೀಚರ್: ವಿಶ್ವದಲ್ಲೇ ಅತಿ ಪುರಾತನ ಪ್ರಾಣಿಯಾವುದು?
ಗೋಪಿ: ಝೀಬ್ರಾ ಮೇಡಂ.
ಟೀಚರ್: ಅದು ಹೇಗೆ?
ಗೋಪಿ: ಅದಿನ್ನೂ ಕಪ್ಪು-ಬಿಳುಪಿನಲ್ಲಿದೆಯಲ್ಲಾ ಮೇಡಂ?!

★★★

ಅಪ್ಪ: ಈ ಬಿಲ್ಲುಗಳನ್ನು ನೋಡು, ಮನೆ ಬಾಡಿಗೆ, ವಿದ್ಯುತ್ ಬಿಲ್, ಟೆಲಿಫೋನ್ ಬಿಲ್, ಅಂಗಡಿ ಸಾಮಾನುಗಳು ಹೀಗೆ... ಎಲ್ಲದರ ಬೆಲೆಯೂ ಹೆಚ್ಚಾಗುತ್ತಲೇ ಇದೆ. ಒಂದೇ ಒಂದು ವಸ್ತುವಿನ ಬೆಲೆ ಕಡಿಮೆಯಾಗಿದ್ದರೂ ತುಂಬಾ ಖುಷಿಯಾಗುತ್ತಿತ್ತು.
ಮಗ: ಹಾಗಾದರೆ ನನ್ನ ಈ ರಿಪೋರ್ಟ್ ಕಾರ್ಡನ್ನು ಒಮ್ಮೆ ನೋಡಿ ಬಿಡಿ ಅಪ್ಪ!

★★★

ಮಗ: ತಾಯಿ ಮತ್ತು ಹೆಂಡತಿಯ ಕಣ್ಣೀರಿಗಿರುವ ವ್ಯತ್ಯಾಸವೇನು?
ಅಪ್ಪ: ತಾಯಿಯ ಕಣ್ಣೀರು ನಿನ್ನ ಹೃದಯವನ್ನು ತಟ್ಟಿದರೆ ಹೆಂಡತಿಯ ಕಣ್ಣೀರು ನಿನ್ನ ಜೇಬನ್ನು ತಟ್ಟುವುದು!

(ಸಂ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ




ಹೋಗಲಿ ದೆವ್ವ, ಭೂತಗಳನ್ನಾದರೂ ಬಿಡಿಸಬಹುದಾ ಸಾರ್, ಬೇಗ ಹೇಳಿ ನಿಮಗೆ ಭೂತ ಬಿಡಿಸುತ್ತೇನೆ..!




ಮುಂಭಾಗದಲ್ಲಿ ಆಸೀನರಾಗಿರುವ ಕವಿಗಳೇ.. ಹಾಗೂ ವೇದಿಕೆಯಲ್ಲಿ ಉಪಸ್ಥಿತರಿರುವ ಪ್ರೇಕ್ಷಕರಿಗೆ ವಂದಿಸುತ್ತಾ....




'ಚೆಲ್ಲಾಪಿಲ್ಲಿ' ಸಿನೆಮಾ.. ಏನದು, ಬಿಜೆಪಿ ಕಥೇನಾ?